<u>ಸಾಕ್ಷಿಯನ್ನು ದಿಃ 12.01.2022 ರಂದು ಕರೆಸಿ ಪ್ರಮಾಣ ಬೋಧಿಸಲಾಯಿತು.</u>

<u>ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ. ಪಿ.ಆರ್ ವಕೀಲರಿಂದಃ</u>

ದಿನಾಂಕ 04.12.2010 ರಂದು ನಾನು ಪ್ರತಿವಾದಿಗೆ ನೀಡಿದ 50,000 ಸಾಲಕ್ಕೆ ಸಂಭಂದಿಸಿದಂತೆ ಪ್ರತಿವಾದಿಯು ಬರೆದುಕೊಟ್ಟ ಪತ್ರವನ್ನು ಹಾಜರುಪಡಿಸಿರುತ್ತೇನೆ ಸದರಿ ಪತ್ರದ ಮೇಲೆ ಕೊರತೆ ಮುದ್ರಾಂಕ ಶುಲ್ಕ ಪಾವತಿ ಮಾಡಿರುತ್ತೇನೆ ಸಾಕ್ಷಿಯು ಸದರಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಸದರಿ ಪತ್ರಕ್ಕೆ ಗೋವಿಂದಪ್ಪ ಮತ್ತು ವೆಂಕಟೇಶರೆಡ್ಡಿ ರವರು ಸಾಕ್ಷಿದಾರಾರಾಗಿ ಸಹಿ ಮಾಡಿರುತ್ತಾರೆ. ಪ್ರತಿವಾದಿ ಸದರಿ ಪತ್ರಕ್ಕೆ ತನ್ನ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾನೆ.

ಪ್ರತಿವಾದಿಗೆ ಕಳುಹಿಸಿದ ನೋಟೀಸ್ಸಿನ ಕಛೇರಿ ಪ್ರತಿಯನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಪಿ-2 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು</u>.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**Sd/-**

(ದೀಪು ಬಿ.ಸಿ.)

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಬಂಗಾರಪೇಟೆ.